ಅ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲಾ ವೇದಿಕೆಯಲ್ಲಿ ಖಾಲಿ ಇರುವ ಸ್ಥಾನಗಳ ವಿವರ:

1) ಸದಸ್ಯರು - 1

2) ಸಹಾಯಕ ನೊಂದಣಾಧಿಕಾರಿ- 1

3) ಶೀಘ್ರ ಲಿಪಿಗಾರರು - 2

4) ವಾಹನ ಚಾಲಕ -1

ರಾಜ್ಯದ ಇತರ ಜಿಲ್ಲಾ ವೇದಿಕೆಗಳಿಗೆ ಮಂಜೂರಾಗಿರುವ ಹುದ್ದೆಗಳು:

1) ಸಹಾಯಕ ನೊಂದಣಾಧಿಕಾರಿ - 1

2) ಶಿರಸ್ತೆದಾರರು - 1

3) ಪ್ರಥಮ ದರ್ಜೆ ಸಹಾಯಕರು - 1

4) ದ್ವಿತೀಯ ದರ್ಜೆ ಸಹಾಯಕ - 1

5) ಶೀಘ್ರ ಲಿಪಿಗಾರರು - 2

6) ಗ್ರೂಪ್-ಡಿ - 3

7) ವಾಹನ ಚಾಲಕ - 1

ಆ) ದಕ್ಷಿಣ ಕನ್ನಡ ಜಿಲ್ಲಾ ವೇದಿಕೆಯ ಮಹಿಳಾ ಸದಸ್ಯರನ್ನು ಆಯ್ಕೆ ಸಮಿತಿಯಿಂದ ಹೆಸರು ವಾಪಸ್ಸು ಬಂದ ನಂತರ ಮಾಡಲಾಗುವುದು.

ಸಹಾಯಕ ನೋಂದಣಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವ ವಿಷಯವು ಪರಿಶೀಲನೆಯಲ್ಲಿದೆ. ಶೀಘ್ರ ಲಿಪಿಗಾರರ ಆಯ್ಕೆ ಪಟ್ಟಿಯು ಸ್ವೀಕೃತವಾಗಿದ್ದು ಅವರನ್ನು ನೇಮಿಸಲು ಶೀಘ್ರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಧ್ಯಕ್ಷರು: ಮಂಡಿಸಲಾಯಿತು.

2) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಶೂನ್ಯವೇಳೆ

ಅ) ಶ್ರೀ ಸಭಾಪತಿಯವರ ಮೇಲೆ ಹೂಡಿರುವ ಮೊಕದ್ದಮೆಯನ್ನು ವಾಪಸ್ ಮಾಡಿಕೊಳ್ಳುವ ಬಗ್ಗೆ.

ಶ್ರೀ ಯು.ಆರ್. ಸಭಾಪತಿ: ಸನ್ಮಾನ್ಯ ಅಧ್ಯಕ್ಷರೆ, ಈ ಹಿಂದೆ ನಾನು ಇದೇ ಸದನದಲ್ಲಿ ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 191ರಂತೆ ಕುಂದಾಪುರದ ಆಗಿನ ಸಬ್ ಇನ್ಸ್‌ಪೆಕ್ಟರ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್ ಹಾಗೂ ಉಪ ತಹಶೀಲ್ದಾರ್ ಅವರು ನನ್ನನ್ನು ಮತ್ತು ಬೈಂದೂರು ಕ್ಷೇತ್ರದ ಶಾಸಕರಾದ ಜಯರಾಮಶೆಟ್ಟಿಯವರಿಗೆ ಸಾರ್ವಜನಿಕ ಕೆಲಸ ನಿರ್ವಹಿಸಲು ಕೊಟ್ಟಂಥ ತೊಂದರೆ ಹಾಗೂ ಕಿರುಕುಳದ ವಿರುದ್ಧ ಹಕ್ಕುಚ್ಯುತಿ ಸೂಚನೆ ಮಂಡಿಸಲು ತಮ್ಮ ಅನುಮತಿ ಕೋರಿದ್ದೆನು. ಅಂದಿನ ಕಂದಾಯ ಸಚಿವರಾಗಿದ್ದ ಶ್ರೀಯುತ ಜಾಲಪ್ಪನವರು ಡಿ.ವಿ.ಸಿ.ಯವರ ಮೂಲಕ ಈ ವಿಚಾರವನ್ನು....

ಅಧ್ಯಕ್ಷರು: ಆಗ ಅವರು ಆ ಕೇಸನ್ನು ಹಿಂದಕ್ಕೆ ತೆಗೆದುಕೊಳ್ಳುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಈಗ ಅದರ ಪೂರ್ಣ ಇತಿಹಾಸ ಮತ್ತೆ ಪ್ರಸ್ತಾಪವಾಗುವುದು ಬೇಡ.

ಶ್ರೀ ಯು.ಆರ್. ಸಭಾಪತಿ: ಡಿ.ವಿ.ಸಿ. ಯವರ ಮೂಲಕ ತನಿಖೆ ಮಾಡಿಸುತ್ತೇವೆಂದು ಹೇಳಿದರೂ ಕೂಡಾ ಇವರು ಕ್ರಿಮಿನಲ್ ಕೇಸ್....

ಅಧ್ಯಕ್ಷರು: ನಿಮ್ಮಮೇಲೆ ಹೂಡಿದ್ದಂಥ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಬೇಕೆಂದು ಒಪ್ಪಂದವಾಗಿತ್ತು... ನಿಮಗೆ ವಾರಂಟ್ ಬಂದಿದೆ.

ಶ್ರೀ ಯು.ಆರ್.ಸಭಾಪತಿ: ಆಗ ಗೃಹ ಮಂತ್ರಿಗಳು ಮೊಕದ್ದಮೆಯನ್ನು ಹಿಂತೆಗೆದುಕೊಳ್ಳುತ್ತೇನೆಂದು ಹೇಳಿದ್ದರೂ ಇವೊತ್ತಿನವರೆವಿಗೂ ಹಿಂತೆಗೆದುಕೊಂಡಿಲ್ಲ.

ಶ್ರೀ ಎಂ.ಸಿ. ನಾಣಯ್ಯ: ಮಾನ್ಯ ಸಭಾಧ್ಯಕ್ಷರೆ, ಈ ವಿಚಾರ ಕಳೆದ ಅಧಿವೇಶನದ ಸಂದರ್ಭದಲ್ಲೂ ಚರ್ಚೆಗೆ ಬಂದಿತ್ತು. ಇದರ ಬಗ್ಗೆ ಚರ್ಚೆಯಾಗಿ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳುಲಾಗುವುದೆಂದು ಸಚಿವರು ಆಶ್ವಾಸನೆ ಕೊಟ್ಟಿದ್ದರೆಂದು ಸದಸ್ಯರು ಹೇಳುತ್ತಿದ್ದಾರೆ. ಆದರೆ, ಚರ್ಚೆಯ ಸಂದರ್ಭದಲ್ಲಿ ನಾನು ಉಪಸ್ಥಿತನಿರಲಿಲ್ಲ. ಆದರೆ, ಸರ್ಕಾರ ಆಶ್ವಾಸನೆಯಿತ್ತಿರುವುದರಿಂದ ಆ ಸಂಬಂಧವಾದ ಕಡತಗಳು ನನ್ನ ಬಳಿ ಈಗ ಇಲ್ಲ. ಒಂದು ಮಾತ್ರ ನಿಜ. ಏನೆಂದರೆ ಶ್ರೀಮಾನ್ ಜಾಲಪ್ಪನವರು ಕಂದಾಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಈ ವಿಚಾರವಾಗಿ ಡಿ.ವಿ.ಸಿ.ಯವರ ಮುಖಾಂತರ ವಿಚಾರಣೆ ನಡೆಸಿ ವರದಿ ತರಿಸಿಕೊಳ್ಳುತ್ತೇನೆಂದು ಹೇಳಿರುವುದು ನನಗೆ ಗೊತ್ತಿದೆ. ಆದುದರಿಂದ, ಸಂಬಂಧಪಟ್ಟ ಕಡತ ತರಿಸಿ, ಚರ್ಚೆಯ ನಡವಳಿಕೆಗಳನ್ನೂ ಸಹ ಗಮನಿಸಿ ಗೃಹ ಮಂತ್ರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಹೆಚ್.ಎನ್.ನಾಗೇಗೌಡ: ಕಡತ ತೆಗೆಯುವ ಪ್ರಶ್ನೆ ಬಂದಿಲ್ಲ. ಅವೊತ್ತು ತಮ್ಮ ಕಛೇರಿಯಲ್ಲೇ ತೀರ್ಮಾನವಾಯಿತು, ಎಲ್ಲವನ್ನೂ ಗುರುತು ಮಾಡಿಕೊಂಡರು, ಸಿಂಧ್ಯರವರು ಸಹ ಬರೆದುಕೊಂಡರು.

ಅಧ್ಯಕ್ಷರು: ನನ್ನ ಕಛೇರಿಯಲ್ಲೇ ಆ ಸಬ್ ನಡೆಯಿತು. ಅಲ್ಲಿನ ಎಂಪ್ಲಾಯಿಸ್ ಸ್ಟ್ರೈಕ್ ಮಾಡಿದ್ದಾರೆಂದು ಯಾರೋ ಒಬ್ಬರು ಸಬ್ ಇನ್ಸ್‌ಪೆಕ್ಟರ್ ಹಠ ಹಿಡಿದರು. ನನ್ನ ಸಮ್ಮುಖದಲ್ಲಿ ಸಭೆ ನಡೆದಿರತಕ್ಕಂಥದ್ದು. ಒಂದು ವೇಳೆ ಸಭಾಪತಿಯವರು ಆ ರೀತಿ ಮಾಡಿರಬಹುದು, ಆದರೆ, ಜಯರಾಮಶೆಟ್ಟಿಯವರಂಥ ಮೃದು ವ್ಯಕ್ತಿ ಕಛೇರಿಗೆ ಹೋಗಿ ಗಲಾಟೆ ಮಾಡಿದ್ದಾರೆಂದರೆ ನಂಬಲು ಅಸಾಧ್ಯ.

ಶ್ರೀ ಎಂ.ಸಿ. ನಾಣಯ್ಯ: ಮಾನ್ಯ ಅಧ್ಯಕ್ಷರೆ, ಒಂದು ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಮೊಕದ್ದಮೆಯನ್ನು ಹಾಕಿದಾಗ ಪೋಲಿಸ್‌ನವರು ವಿಚಾರಣೆ ಮಾಡತಕ್ಕದ್ದು ಮತ್ತು ಅನಂತರ ಎಫ್.ಐ.ಆರ್.ನ್ನು ಫೈಲ್ ಮಾಡಿ ಕೇಸು ದಾಖಲೆ ಮಾಡತಕ್ಕದ್ದು ನಿಜ. ತಾವು ಹೇಳಿದಂತೆ ಶ್ರೀ ಜಯರಾಮಶೆಟ್ಟಿಯವರು ಶಾಂತಿಯ ಮನುಷ್ಯ ಎಂಬುದನ್ನು ನಾನು ಒಪ್ಪುತ್ತೇನೆ. ನಾವು ಇಲ್ಲಿ ಏನು ವಿಚಾರವನ್ನು ಹೇಳಿರುತ್ತೇವೊ ಅದು ಅಲ್ಲಿನ ಕಡತದಲ್ಲಿ ರಿಫ್ಲೇಕ್ಟ್ ಆಗಿರುವುದಿಲ್ಲ. ಆದ್ದರಿಂದ ನಾನು ತಮ್ಮ ಜೊತೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡುತ್ತೇನೆ, ಬಹುಶಃ ಕಾನೂನು ಇಲಾಖೆಯಿಂದ ಬಂದಿರುವ ವಿಚಾರದ ಬಗ್ಗೆ ತಮ್ಮ ಜೊತೆಯಲ್ಲಿ ಚರ್ಚೆ ಮಾಡಿ, ಆ ಕಡತವನ್ನು ತರಿಸಿ ಪರಿಶೀಲನೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ತಮ್ಮ ಕೊಠಡಿಯಲ್ಲಿಯೇ ಮಾಡುತ್ತೇವೆಂದು ಒಪ್ಪಿಕೊಂಡ ಮೇಲೂ ಈ ರೀತಿ ಹೇಳಿದಂತೆ ಹೇಗೆ?

(ಸರ್ಕಾರದ ಉತ್ತರವನ್ನು ವಿರೋಧಿಸಿ ಶ್ರೀ ಯು.ಆರ್. ಸಭಾಪತಿ, ಶ್ರೀ ಜಯರಾಮಶೆಟ್ಟಿ, ಶ್ರೀ ಅಂಗಾರ, ಶ್ರೀ ಸದಾನಂದಗೌಡ, ಕುಂಬಳೆ ಸುಂದರರಾವ್, ಶ್ರೀ ಡಿ.ಎನ್. ಮಾದಪ್ಪ ಮುಂತಾದವರು ಬಾವಿಯಲ್ಲಿ ಧರಣಿ ಮಾಡಿದರು)

ಶ್ರೀ ಎಂ.ಸಿ. ನಾಣಯ್ಯ: ವಿಚಾರದ ಬಗ್ಗೆ ಸಹಾನುಭೂತಿಯಿಂದ ವ್ಯಕ್ತ ಮಾಡಬೇಕಾಗುತ್ತದೆ. ಕಡತವನ್ನು ತರಿಸಿ ನೋಡುವುದಾಗಿ ಹೇಳಿದ್ದೇನೆ. ಒಂದು ಸಲ ಮೊಕದ್ದಮೆ ಹೂಡಿದ ಮೇಲೆ ಮನಸ್ಸಿಗೆ ಬಂದಂತೆ ಅದನ್ನು ವಾಪಸ್ ತೆಗೆದುಕೊಳ್ಳಲು ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಯಲ್ಲಿ ಆದ ತೀರ್ಮಾನವೇ ಈ ರೀತಿಯಾದರೆ ಇನ್ನು ಬೇರೆಯದ್ದರ ಗತಿಯೇನು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಯಲ್ಲಿ ಯಾವುದನ್ನು ಒಪ್ಪಿಕೊಂಡಿದ್ದೆವೋ, ಸರ್ಕಾರದಿಂದ ಏನನ್ನೂ ಹೇಳಿದ್ದಾರೆಯೋ ಅದನ್ನು ನಡೆಸಿಕೊಡುತ್ತೇವೆ. ತಮ್ಮಗಳಲ್ಲಿ ಬಹಳಷ್ಟು ಜನ ವಕೀಲರುಗಳಿದ್ದೀರಿ. ಯಾವುದನ್ನು ವಾಪಸ್ ತೆಗೆದುಕೊಳ್ಳಬೇಕು ಯಾವ ಮೊಕದ್ದಮೆಯನ್ನು ವಾಪಸ್ ತೆಗೆದುಕೊಳ್ಳಬಾರದು ಮುಂತಾದ ಬಗ್ಗೆ ತಮಗೆ ಗೊತ್ತಿದೆ. ಅಧ್ಯಕ್ಷರ, ಕೊಠಡಿಯಲ್ಲಿ ಆದ ತೀರ್ಮಾನದ ದಿವಸ ನಾನು ಇರಲಿಲ್ಲ. ಆದರೂ ಸಹ ಅಂದು ಏನು ತೀರ್ಮಾನವಾಗಿದೆ ಅದರಂತೆ ನಡೆದುಕೊಳ್ಳುತ್ತೇವೆ. we will go according to your docision.

ಅಧ್ಯಕ್ಷರು: ವಿಚಾರ ಸಹ ಏನಾಗುತ್ತದೆಂದರೆ, ಯಾರು ಜಿದ್ದಿನಿಂದ ಮಾಡಿದ್ದಾರೆ ಎಂಬುದು ನಮಗೆ ಗೊತ್ತಾಗಿರುತ್ತದೆ. ಇಲ್ಲಿ ಏನಾಗಿದೆಯೆಂದು ಮೇಲುನೋಟಕ್ಕೆನ ನಮಗೆ ಗೊತ್ತಾಗುತ್ತದೆ. ಜಿದ್ದಿನಿಂದ ಮಾಡಿದ್ದರೆ ನಮಗೇ ಗೊತ್ತಾಗುತ್ತದೆ. ಆದರೆ ವಿಷಯ ಸರಳವಾಗಿದ್ದರೂ ಸಹ ಏನಾಗುತ್ತದೆಂದರೆ, ಕೋರ್ಟ್‌ನವರು ಈ ಇಬ್ಬರು ಸದಸ್ಯರ ಮೇಲೆ ವಾರೆಂಟ್‌ನ್ನು ಸರ್ವ್ ಮಾಡಿಯೆಂದು ನನ್ನ ಕಛೇರಿಗೆ ಸಮನ್ಸ್‌ನ್ನು ಕೇಳಿಸುತ್ತಾರೆ, Prima facie it is evident that the particular officer must be a very mischievous person. We are here

to protect the honour rights, and privileges, or the than members it does not meen that they are empowered and entitled to do all that they want to do some decision was arrived at in my chamber to see that this in matter does not proceed further. In between two sessions have elapsed. I obly appeal to the Government to see that the matter does not get precipitated any further. we must find a solution at the earliest, atleant in the next two days.

ಶ್ರೀ ಜೆ.ಹೆಚ್. ಪಟೇಲ್ (ಅಧ್ಯಕ್ಷರೇ): I will come to you, in two days.

ಶ್ರೀ ಅಧ್ಯಕ್ಷರು: ಎರಡು ದಿವಸಗಳಲ್ಲಿ ಇದನ್ನು ಪರಿಹಾರ ಮಾಡುತ್ತಾರಂತೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಕಳುಹಿಸಿ ಸಮನ್ಸ್ ಕೊಟ್ಟಿರತಕ್ಕದ್ದು ಅಪರಾಧವಲ್ಲವೆ? ಆ ಅಧಿಕಾರಿಯನ್ನು ಸಸ್‌ಪೆಂಡ್ ಮಾಡಬೇಕು. ನಮ್ಮ ಮೇಲೆ ಅವರು ಕೇಸನ್ನು ಹಾಕಲಿ. ಆದರೆ ತಮ್ಮ ಮೂಲಕ ಅವರು ಸಮನ್ಸ್ ಕಳುಹಿಸುವುದು ಸರಿಯಿಲ್ಲ. ಇದು ಬಹಳ ಗುರುತರವಾದುದು. ಇದನ್ನು ವಿರೋಧಿಸಿ ನಾನೂ ಧರಣಿ ಮಾಡುತ್ತೇನೆ.

ಅಧ್ಯಕ್ಷರು: ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ. ವಾಟಾಳ್ ನಾಗರಾಜ್‌ರವರಿಗೆ ಇದರ ಬಗ್ಗೆ ಬಹಳ ಪರಿಚಯವಿದೆ. ಇದು ಬಹಳ ಮೆಜಿಸ್ಟೀರಿಯಲ್ ವಿಚಾರವಾಗಿದೆ.

ಶ್ರೀ ವಾಟಾಳ್ ನಾಗರಾಜ್: ನನ್ನ ಮೇಲೆ 800 ಕೇಸುಗಳಿವೆ.

ಅಧ್ಯಕ್ಷರು: ಸಮನ್ಸ್‌ನ್ನು ಕಳುಹಿಸಿರುವವರು ನ್ಯಾಯಾಲಯದವರು. ನಮ್ಮ ಕಚೇರಿಗೆ ಕಳುಹಿಸಿಕೊಟ್ಟಿದ್ದಾರೆ. ಮತ್ತು ಸದಸ್ಯರ ಮೇಲೆ ಸರ್ವೆ ಮಾಡಿ ಎಂದು ಹೇಳಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಎಂಬ ಬಗ್ಗೆ ನಾನು ಆಲೋಚನೆ ಮಾಡಿ ನನ್ನ ಕೆಲಸವನ್ನು ನಾನು ಮಾಡಿದ್ದೇನೆ. ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ ತಮ್ಮ ಕೊಠಡಿಯಲ್ಲಾದ ತೀರ್ಮಾನ ಈ ರೀತಿಯಾದರೆ ಇನ್ನು ಜನಸಾಮಾನ್ಯರ ಗತಿಯೇನು?

ಅಧ್ಯಕ್ಷರು: ಎರಡು ದಿವಸಗಳಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಂಡು ಉತ್ತರವನ್ನು ಕೊಡುವುದಾಗಿ ಮುಖ್ಯಮಂತ್ರಿಯವರು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಮತ್ತೆ ಚರ್ಚೆ ಬೇಡ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾಳೆ ಅವರು ಹೋದ ತಕ್ಷಣ ಮತ್ತೆ ಅರೆಸ್ಟ್ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ನನಗೆ ಒಂದು ವಿಚಾರ ತಿಳುವಳಿಕೆಯಾಗಬೇಕು. ಅದೇನೆಂದರೆ, ಮಾನ್ಯ ಅಧ್ಯಕ್ಷರ ಮೂಲಕ ಸಮನ್ಸ್‌ನ್ನು ಜಾರಿಗೆ ತನ್ನ ಎಂದು ನ್ಯಾಯಾಲಯ ಕಳುಹಿಸಬಹುದೆ? ಇದು ಬಹಳ ಮುಖ್ಯವಾದುದು.

ಅಧ್ಯಕ್ಷರು: ಆ ವಿಚಾರದಲ್ಲಿ ಏನು ಉತ್ತರವನ್ನು ಕೊಡಬೇಕೋ ಅದನ್ನು ನಾನು ಕೊಟ್ಟಿದ್ದೇನೆ. ಅವರು ಕೊಟ್ಟಿರತಕ್ಕದ್ದು ಸರಿಯೋ, ತಪ್ಪೋ ಎಂಬ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ಸದನದ ಅಧ್ಯಕ್ಷರ ಸ್ಥಾನದ ಗೌರವವನ್ನು ಕಾಪಾಡತಕ್ಕ ದೃಷ್ಟಿಯಿಂದ ಏನು ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪವಾಗಿದೆ. ಆದ್ದರಿಂದ ತಾವು ತೀರ್ಪನ್ನು ಕೊಡಲೇ ಬೇಕು. ಇತಿಹಾಸದಲ್ಲಿ ತಮ್ಮ ತೀರ್ಪು ಇರಬೇಕು.

ಅಧ್ಯಕ್ಷರು: ಕಾನೂನು ತಜ್ಞರೊಡನೆ ಚರ್ಚೆ ಮಾಡುತ್ತಿದ್ದೇನೆ. ಚರ್ಚೆ ಇನ್ನೂ ಪೂರ್ಣವಾಗಿಲ್ಲ.

Sri Mallikarjuna kaharge: This is not correct. ಅವರು ಹೇಳಿ ಎಂಟು ತಿಂಗಳಾಗಿದೆ. ಇನ್ನೂ ಅದರ ಬಗ್ಗೆ ನೋಡುತ್ತೇನೆಂದರೆ ಹೇಗೆ?

ಶ್ರೀ ಹೆಚ್.ಎನ್. ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಸಮನ್ಸ್ ಇಶ್ಯೂ ಮಾಡತಕ್ಕದ್ದು ಬೇರೆ, ವಾರೆಂಟ್ ಇಶ್ಯೂ ಮಾಡತಕ್ಕದ್ದೇ ಬೇರೆ. ಈಗ ಅರೆಸ್ಟ್ ಬಗ್ಗೆ ಇಶ್ಯೂ ಮಾಡಿದ್ದಾರೆ.

Mr Speaker: When accoused is chargesheeted and the Chargesheet is submitted to the Court, when the acoused does not turn up in the court as against the dates they are supposed to appear when the matter is listed for business in the Court, the Court will have no other alternative but to serve the warrant to secure the presence of the a ccused in the court.

ಶ್ರೀ ಹೆಚ್.ಎನ್. ನಂಜೇಗೌಡ: ಅಧ್ಯಕ್ಷರೆ, ಅದು ನನಗೂ ಗೊತ್ತಿದೆ. ಎಂಟು ತಿಂಗಳ ಹಿಂದೆ ಚರ್ಚೆಯಾಗಿದೆ. ಅಂದು ಸಿಂಧ್ಯರವೇ, ಒಂದರ ಪ್ರಕಾರ ಮತ್ತೊಂದನ್ನು ನೋಟ್ ಮಾಡಿಕೊಂಡಿದ್ದರು.

Mr Speaker: Lot of changes have taken place. Mr. Scindia has moved on from Ministry to Transport Ministry, there is a change in the Leadership. there might have been communication gap. The Hon'ble Chief Minister is magnanimous enough to say that be would come back to me. He requires two days. May discussion over matter? ಈ ವಿಚಾರದಲ್ಲಿ ಇನ್ನು ಚರ್ಚೆ ಬೇಡ. ಮುಂದಿನ ವಿಚಾರಕ್ಕೆ ಹೋಗೋಣ. ಮಾನ್ಯ ಟಿ.ಬಿ. ಜಯಚಂದ್ರರವರೆ, ತಮ್ಮ ವಿಚಾರವನ್ನು ಪ್ರಸ್ತಾಪ ಮಾಡಿ.

ಅ) ರಾಜ್ಯದಲ್ಲಿರುವ ಪ್ರೌಢ ಶಾಲಾ ಅರೆಕಾಲಿಕೆ ಶಿಕ್ಷಕರನ್ನು ಖಾಯಂಗೊಳಿಸುವುದು.